# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 685

2) ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸಬೇಕಾದ ದಿನಾಂಕ : 12-03-2025

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯ ಮರವಂತೆ ಹೊರ ಬಂದರು ಕಾಮಗಾರಿಯ ಯೋಜನಾ ಅಂದಾಜು ಮೊತ್ತವೆಷ್ಟು; ಈ ಕಾಮಗಾರಿಯ ಗುತ್ತಿಗೆ ಪಡೆದ ಸಂಸ್ಥೆ ಯಾವುದು; ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ; ಈ ಕಾಮಗಾರಿಯ "ವಿಸ್ತೃತ ಯೋಜನಾ ವರದಿ"ಯ ಪ್ರತಿಯೊಂದಿಗೆ ಗುತ್ತಿಗೆ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ನೀಡುವುದು; | ಉಡುಪಿ ಜಿಲ್ಲೆಯ ಮರವಂತೆಯಲ್ಲಿ 2ನೇ ಹಂತದ ಮೀನುಗಾರಿಕೆ ಹೊರ ಬಂದರು ನಿರ್ಮಾಣ ಕಾಮಗಾರಿಯನ್ನು ರೂ.85.00 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ/ಇ-107/ಮೀಇಯೋ/2020 ದಿನಾಂಕ: 21-09-2020 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಮುಂದುವರೆದು, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಮುಖಾಂತರ ಗುತ್ತಿಗೆದಾರರಾದ Sri Deepak Vishnu Pawar (DVP Infra projects Private Limited), Mumbai ಇವರಿಗೆ ರೂ.7681.97 ಲಕ್ಷಗಳ ಮೊತ್ತಕ್ಕೆ 42 ತಿಂಗಳ ಕಾಲಾವಕಾಶದಲ್ಲಿ ಕೈಗೊಳ್ಳಲು ಅನುಮತಿ ನೀಡಲಾಗಿರುತ್ತದೆ. ವಿಸ್ತೃತಾ ಯೋಜನಾ ವರದಿಯನ್ನು CD ಯಲ್ಲಿ ನೀಡಲಾಗಿದೆ. |
| ಆ) | ಗುತ್ತಿಗೆ ಪಡೆದ ಸಂಸ್ಥೆಯ ಅರ್ಹತೆಯೇನು; ಸಂಸ್ಥೆಯು ಈ ಹಿಂದೆ ಕಾಮಗಾರಿ ನಿರ್ವಹಿಸಿದ ಅನುಭವ ಹೊಂದಿದೆಯೇ; ಈ ಬಗ್ಗೆ 3ನೇ ಪಕ್ಷಗಾರ ಪರಿಶೀಲನೆ ಪಡೆಯಲಾಗಿದೆಯೇ; (ದಾಖಲಾತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ಗುತ್ತಿಗೆ ಪಡೆದ ಸಂಸ್ಥೆಯು KM4 ನಲ್ಲಿ ಅಳವಡಿಸಿರುವ **"Satisfactorily completed (atleast 90% of the Contract Value), as prime contractor, atleast one similar work such as "Construction of Breakwater" of value not less than Rs.3695.32 lakhs. (Usually not less than 50% of estimated value of contract)"** ಷರತ್ತಿಗೆ Mandwa Alibhag ನಲ್ಲಿ 14872.97 ಲಕ್ಷಗಳ ಮೊತ್ತದಲ್ಲಿ Construction of Breakwater ಹಾಗೂ RoRo Pack Service ನಿರ್ವಹಿಸಿರುವ ಅನುಭವವನ್ನು ಹೊಂದಿರುತ್ತಾರೆ. ಸದರಿ ಕಾಮಗಾರಿಯ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. |
| ಇ) | ಮರವಂತೆ ಹೊರ ಬಂದರು ಕಾಮಗಾರಿಯ ಪ್ರಸ್ತುತ ಸ್ಥಿತಿಗತಿಯೇನು; ಈಗಾಗಲೇ ಈ ಕಾಮಗಾರಿಗಾಗಿ ಗುತ್ತಿಗೆದಾರರಿಗೆ ಪಾವತಿ ಮಾಡಲಾದ ಮೊತ್ತವೆಷ್ಟು; ಪಾವತಿ ಮಾಡಲು ಬಾಕಿಯಿರುವ ಮೊತ್ತವೆಷ್ಟು; | ಪ್ರಸ್ತುತ ಈ ಯೋಜನೆಗೆ ಸಿ.ಆರ್.ಜೆಡ್. ನಿಂದ ನಿರಾಕ್ಷೇಪಣೆ ದಿನಾಂಕ: 23-12-2024 ರಂದು ದೊರೆತಿದ್ದು, ಗುತ್ತಿಗೆದಾರರು ಬ್ರೇಕ್‌ವಾಟರ್ ನಿರ್ಮಿಸಲು ಬೇಕಾಗಿರುವ ವಿವಿಧ ಗಾತ್ರಗಳ ಗ್ರಾನೈಟ್ ಕಲ್ಲುಗಳನ್ನು ಶೇಖರಣೆ ಮಾಡಿರುತ್ತಾರೆ. ಗುತ್ತಿಗೆದಾರರಿಗೆ ಈವರೆಗೆ ಯಾವುದೇ ಬಿಲ್ಲುಗಳನ್ನು ಪಾವತಿ ಮಾಡಲಾಗಿರುವುದಿಲ್ಲ. |

| | | |
|---|---|---|
| ಈ) | ಈ ಕಾಮಗಾರಿಯ ಯೋಜನಾ ಅಂದಾಜು ಮೊತ್ತವನ್ನು ಹೆಚ್ಚಿಸುವ ಪ್ರಸ್ತಾಪ ಇಲಾಖೆಯ ಮುಂದಿದೆಯೇ; ಎಷ್ಟು ಮೊತ್ತಕ್ಕೆ ಹೆಚ್ಚಿಸುವ ಪ್ರಸ್ತಾವನೆಯಿದೆ; ಯಾವ ಕಾರಣಕ್ಕಾಗಿ ಈ ಪ್ರಸ್ತಾವನೆಯನ್ನು ಪರಿಗಣಿಸಲಾಗುತ್ತಿದೆ; ಈ ಬಗ್ಗೆ 3ನೇ ಪಾರ್ಟಿ ಅಭಿಪ್ರಾಯ ಪಡೆಯಲಾಗಿದೆಯೇ; ಈ ಕುರಿತಂತೆ ಇಲಾಖಾ ಅಧಿಕಾರಿಗಳ ಹಂತದಲ್ಲಿ ನಡೆದಿರುವ ಪ್ರಕ್ರಿಯೆಯೇನು? | ಈ ಕಾಮಗಾರಿಯ ಯೋಜನಾ ಅಂದಾಜು ಮೊತ್ತವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ. |

ಸಂಖ್ಯೆ: ಪಸಂಮೀ ಇ-71 ಮೀಇಯೋ 2025

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು